ನೋಡಲು ಏನೂ ಇಲ್ಲ. ಶಿವಕುಮಾರ್ ಬಗ್ಗೆ ಅವರು ಮಾತನಾಡಲಿಲ್ಲ. ಕೇಳಲೂ ಇಲ್ಲ. ಮಾತಿನಲ್ಲಿ ಅಂತಹ ಆಸಕ್ತಿ ಇಲ್ಲ. 'ಆರೋಗ್ಯ ನೋಡಿಕೊಳ್ಳಿ' ಎಂದು ಹೇಳಿದ್ದನ್ನು ಕಿವಿಗೆ ಹಾಕಿಕೊಂಡಂತೆ ಕಾಣಲಿಲ್ಲ.

ಎರಡು ವರ್ಷಗಳ ಹಿಂದೆ ಶೆಂಬಾಯಿಅಪ್ಪತ್ತಾ ತೀರಿಕೊಂಡ ಸುದ್ದಿಯನ್ನು ಅಮ್ಮ ನೋವಿನ ದನಿಯಲ್ಲಿ ಫೋನಿನಲ್ಲಿ ಹೇಳಿದ್ದಳು. 'ಕೊಳ್ಳಿ ಹಾಕಲು ಸಹ ಯಾರು ಇರಲಿಲ್ಲ, ಎಲ್ಲವೂ ಅಪ್ಪನ ಮನೆಯಲ್ಲೇ ನಡೆಯಿತು. ಮಕ್ಕಳಿಲ್ಲದ್ದರಿಂದ ಯಾವ ಶ್ರಾದ್ಧವನ್ನೂ ನಡೆಸಲಿಲ್ಲ' ಎಂದು ಗದ್ಗದ ದನಿಯೊಂದಿಗೆ ಅಮ್ಮ ಹೇಳಿದ್ದಳು. ಅವರ ಬಗೆಗೆ ಬಹಳಷ್ಟು ನೆನಪುಗಳಿವೆ. ಅವರೇ ಇಲ್ಲದಿರುವಾಗ ಯಾರ ಬಳಿ ನಾನು ಹೋಗಿ ಶೋಕ ವಿಚಾರಿಸುವುದು? 'ಮುಂದಿನ ಸಲ ಅಲ್ಲಿಗೆ ಹೋದಾಗ, ಅದೇ ನಿನ್ನ ದೊಡ್ಡ ಮಾವನ ಬಳಿ ಒಂದೆರಡು ಮಾತನಾಡಿ ಬಾ' ಎಂದು ಅಮ್ಮ ಹೇಳಿದ್ದಕ್ಕೆ ತಲೆಯಾಡಿಸಿದ್ದೆ. ಅಮ್ಮನನ್ನು ಕರೆದುಕೊಂಡು ಅವರ ಊರಿಗೆ ಹೋಗಿದ್ದೆ; ಬುಟ್ಟಿ ತುಂಬಾ ಮಲ್ಲಿಗೆಯ ಹೂಗಳೊಂದಿಗೆ.

ನನ್ನ ಮನಸ್ಸಿನಲ್ಲಿ ನೆಲೆ ನಿಂತಿರುವ ಶೆಂಬಾಯಿಅಪ್ಪಾತ್ತಾ ಚಿತ್ರಕ್ಕೆ ಬೊಟ್ಟಿಟ್ಟು ಸುಂದರವಾಗಿ ಗೋಡೆಗೆ ತೂಗಿ ಹಾಕಲಾಗಿತ್ತು. ಮಲ್ಲಿಗೆಯನ್ನು ಮಾಲೆಯಂತೆ ಹಲವಾರು ಸರಗಳಾಗಿ ಮಾಡಿ ಹಾಕಿ ನಮಸ್ಕಾರ ಮಾಡಿದೆ. ಮನಸ್ಸಿನೊಳಗೆ ಸ್ಯಾಂಡಲ್ ಪೌಡರಿನ ವಾಸನೆಯನ್ನು, ಬೆವರು ಬೆರೆತ ಸೋಪಿನ ಪರಿಮಳವನ್ನು ಈ ಮಲ್ಲಿಗೆ ಹೂ ಹೊರಸೂಸಿತು. ಆದರೆ, ಈ ಮಲ್ಲಿಗೆ ಆ ಮಲ್ಲಿಗೆಯ ತರಹ ಇರಲಿಲ್ಲ. ಮನಸ್ಸಿನೊಳಗೆ ಹಳೆಯ ನೆನಪುಗಳು ಸ್ವಲ್ಪ ಹಾದುಹೋಗುತ್ತಿರಲು, ಮಾವನ ಮನೆಯ ಚಂದ್ರ ಅತ್ತೆ ಕೊಟ್ಟ ಕಾಫಿಯನ್ನು ಕುಡಿದು ಅಮ್ಮನೊಂದಿಗೆ ಹಿಂತಿರುಗಿದೆನು.

ಕೊಟ್ಟಾಂಬಟ್ಟಿಗೆ ಹಿಂತಿರುಗುವ ದಾರಿಯಲ್ಲಿ, ಯಾರನ್ನೋ ನೋಡಿದ ಅಮ್ಮ, ಗಾಡಿಯನ್ನು ನಿಲ್ಲಿಸಲು ಹೇಳಿ ಇಳಿದಳು. ಒಬ್ಬ ಮುದಿ ಮನುಷ್ಯ. ಹಣ್ಣಿನಂತ ಬಣ್ಣ. ಬಿಳಿಯಾದ ಸಿನಿಮಾ ನಟರಂತಹ ಕೇಶ. ಕುತ್ತಿಗೆಯಲ್ಲಿ ಚಿನ್ನದಲ್ಲಿ ಪೋಣಿಸಿದ್ದ ರುದ್ರಾಕ್ಷಿ ಮಾಲೆ. ತೆಳುವಾದ ರೇಷ್ಮೆ ವಸ್ತ್ರ ಹೊದ್ದ ದೇಹ. ಹಣೆಯಲ್ಲಿ ವಿಭೂತಿ, ಗಂಧ, ಕುಂಕುಮ.

'ಚೆನ್ನಾಗಿದ್ದೀರಾ ಅಣ್ಣ?' ಎಂದು ಅಮ್ಮ ವಿಚಾರಿಸಿದಳು.

ಅಮ್ಮನನ್ನು ಗುರುತು ಹಿಡಿದು ಅವರೂ ಕ್ಷೇಮ ವಿಚಾರಿಸಿದರು.

'ನನ್ನ ಮಗ, ಶೆಂಬಾಯಿಅಪ್ಪತ್ತಾರ ಕಾರ್ಯಕ್ಕೆ ಬರಲಿಲ್ಲ. ಈಗ ಹೋಗಿ ದುಃಖ ವಿಚಾರಿಸಿಕೊಂಡು ಬರುತ್ತಿದ್ದೆವು. ಅದಕ್ಕಾಗಿ ಕರೆದುಕೊಂಡು ಬಂದೆ' ಎಂದಳು ಅಮ್ಮ.

ಅದರ ಬಗ್ಗೆ ಕಾಳಜಿ ಕಾಣದಿದ್ದರೂ ಅವರಿಗೆ ದುಃಖ ಇರುವುದು ತಿಳಿಯಿತು. 'ಏನು ಮಾಡೋದು? ಯಾವುದೂ ನಮ್ಮ ಕೈಯಲ್ಲಿಲ್ಲ' ಎಂದು ಸಹಜವಾಗಿ ಹೇಳಿದರು.

ಸ್ವಲ್ಪ ಸಮಯ ಮೌನವಾಗಿದ್ದ ಅಮ್ಮ, 'ಇನ್ನೂ ಮುರುಗನ ದೇವಸ್ಥಾನದಲ್ಲಿ ನೀವೇ ಪೂಜೆ ಮಾಡುತ್ತಿದ್ದೀರಾ ಅಣ್ಣ?' ಎಂದು ಮಾತು ಬದಲಾಯಿಸಿದಳು.

'ಬೇರೆ ಏನು ಮಾಡುವುದು? ಮುರುಗನಿಗೆ ನನ್ನ ಬಿಟ್ಟರೆ ಬೇರೆ ಗತಿಯಿಲ್ಲ. ನನಗೂ ಅವನನ್ನು ಬಿಟ್ಟರೆ ಯಾರಿದ್ದಾರೆ. ಅಣ್ಣನ ಮಕ್ಕಳೆಲ್ಲಾ ಬೇರೆಯ ಊರುಗಳಿಗೆ ಜೀವನ ನಡೆಸಲು ಹೊರಟುಹೋದರು. ಪಂಡಾರ ಕುಟುಂಬದಲ್ಲಿ ಹುಟ್ಟಿ ಊರಲ್ಲೇ ಇದ್ದುಕೊಂಡು ಪೂಜೆ ಮಾಡದೆ ಹೇಗೆ ಇರೋದಮ್ಮ?' ಎಂದು ದಣಿವಿನಿಂದ ಕೇಳಿದರು.

'ಎಲ್ಲಕ್ಕೂ ಮುರುಗನ್ ದಾರಿ ತೋರಿಸುತ್ತಾನೆ' ಎಂದು ಹೇಳಿ, 'ಸರಿ ನಾವು ಹೊರಡುತ್ತೇವೆ. ಮನಸ್ಸಿಗೆ ಧೈರ್ಯ ತಂದುಕೊಳ್ಳಿ' ಎಂದು ಅಮ್ಮ ಹೊರಟಳು. ನನ್ನನ್ನು ಹೊರಡಿಸಿದಳು.